# ‘ಮನುಷ್ಯರ ಅಸ್ತಿತ್ವದ ಹೋರಾಟ ಸಾಹಿತ್ಯದ ನೈಜ ವಸ್ತು’

ಕೊಂಕಣಿಯ ಪ್ರಮುಖ ಕಥಾಲೇಖಕ ಮಹಾಬಳೇಶ್ವರ ಸೈಲ್ ಅವರಿಗೆ 2016ನೇ ಸಾಲಿನ ಪ್ರತಿಷ್ಠಿತ ‘ಸರಸ್ವತಿ ಸಮ್ಮಾನ್’ ಪ್ರಶಸ್ತಿ ದೊರೆತಿದೆ. 1991ರಲ್ಲಿ ಕೆ.ಕೆ. ಬಿರ್ಲಾ ಫೌಂಡೇಶನ್ ಸ್ಥಾಪಿಸಿರುವ ಸರಸ್ವತಿ ಸಮ್ಮಾನ್ ಪ್ರಶಸ್ತಿಯನ್ನು ಕಳೆದ ಹತ್ತು ವರ್ಷಗಳಲ್ಲಿ 22 ಭಾರತೀಯ ಭಾಷೆಗಳಲ್ಲಿ ಪ್ರಕಟವಾಗಿರುವ ಕೃತಿಗಳಲ್ಲಿ ಮಹತ್ವದೆನ್ನಿಸಿದ ಗದ್ಯ ಅಥವಾ ಕಾವ್ಯ ಕೃತಿಗೆ ನೀಡಲಾಗುತ್ತಿದೆ. ಪ್ರಶಸ್ತಿ ಐದು ಲಕ್ಷ ನಗದು ಹಾಗೂ ಸ್ಮರಣಿಕೆಯನ್ನು ಹೊಂದಿದೆ. ಈ ವರ್ಷ ಮಹಾಬಳೇಶ್ವರ ಸೈಲ್ ಅವರ ‘ಹಾವಠಣ’ ಕೊಂಕಣಿ ಕಾದಂಬರಿ ಈ ಪ್ರಶಸ್ತಿಗೆ ಆಯ್ಕೆಯಾಗಿದೆ.

1943ರ ಆಗಸ್ಟ್ ನಾಲ್ಕರಂದು ಕಾರವಾರ ಸಮೀಪದ ಮಾಜಾಳಿ ಎಂಬ ಹಳ್ಳಿಯಲ್ಲಿ ಜನಿಸಿದ ಮಹಾಬಳೇಶ್ವರ್ ಸೈಲ್ ಕೆಲವು ವರ್ಷ ಭಾರತೀಯ ಸೇನೆಯಲ್ಲಿ ಸೇವೆ ಸಲ್ಲಿಸಿದವರು. ವಿಶ್ವಸಂಸ್ಥೆಯ ಸೈನ್ಯದಳದಲ್ಲಿ ಶಾಂತಿಸೈನಿಕರಾಗಿ ಈಜಿಪ್ಟ್, ಇಸ್ರೇಲ್ ಮೊದಲಾದೆಡೆಗಳಲ್ಲಿ ಕೆಲಸ ನಿರ್ವಹಿಸಿದವರು. 1965ರಲ್ಲಿ ಭಾರತ–ಪಾಕ್ ಯುದ್ಧದಲ್ಲಿ ಭಾಗಿಯಾಗಿದ್ದ ಇವರು ಸೇನೆಯಿಂದ ಸ್ವಯಂ ನಿವೃತ್ತಿಯ ಬಳಿಕ ಗೋವೆಯ ಪೊಲೀಸ್ ತರಬೇತಿ ಶಾಲೆಯಲ್ಲಿ ಎರಡು ವರ್ಷ, ಬಳಿಕ ಅಂಚೆ ಇಲಾಖೆ ಸೇರಿ ಪೋಸ್ಟ್ ಮಾಸ್ಟರ್ ಹುದ್ದೆಯಲ್ಲಿದ್ದು, ನಿವೃತ್ತಿ ಹೊಂದಿದ್ದಾರೆ. ಪ್ರಸ್ತುತ ಗೋವೆಯಲ್ಲಿ ವಿಶ್ರಾಂತ ಜೀವನ ನಡೆಸುತ್ತಿದ್ದಾರೆ.

ನಾಲ್ಕು ದಶಕಗಳಿಂದ ನಿರಂತರವಾಗಿ ಬರೆಯುತ್ತ ಬಂದಿರುವ 70ರ ಹರೆಯದ ಈ ಲೇಖಕರ ‘ತರಂಗ್’, ‘ಬಾಯನೆಟ್ ಫಾಯರಿಂಗ್’, ‘ನಿಮಾಣೊ ಅಶ್ವತ್ಥಾಮಾ’ ಸೇರಿದಂತೆ ಐದು ಕಥಾಸಂಕಲನಗಳು, ‘ಕಾಳಿಗಂಗಾ’, ‘ಅರಣ್ಯಕಾಂಡ’, ‘ಹಾವಠಣ’, ‘ಅದೃಷ್ಟ’, ‘ಯುಗಸಾಂವರ’ ಮೊದಲಾದ ಒಂಬತ್ತು ಕಾದಂಬರಿಗಳು ಪ್ರಕಟವಾಗಿವೆ. ಮರಾಠಿಯಲ್ಲಿ ಐದು ನಾಟಕಗಳು ಮತ್ತು ಸ್ವಂತ ಕಾದಂಬರಿಯ ಅನುವಾದ ‘ತಾಂಡವ್’ ಪ್ರಕಟವಾಗಿದೆ. ಗೋವೆಯ ಇತಿಹಾಸದ ಕರಾಳ ಅಧ್ಯಾಯವೆಂದು ಪರಿಗಣಿತವಾಗಿರುವ ಪೋರ್ತುಗೀಸ್ ಆಡಳಿತಾವಧಿಯಲ್ಲಿ ಅಲ್ಲಿಯ ಜನಜೀವನ ತೀರಾ ಅಸ್ತವ್ಯಸ್ತಗೊಂಡದ್ದನ್ನು ಚಿತ್ರಿಸಿದ ‘ಯುಗಸಾಂವರ್’ ಬೃಹತ್ ಚಾರಿತ್ರಿಕ ಕಾದಂಬರಿ. ತಮ್ಮ ಕಥಾಸಾಹಿತ್ಯದ ಮೂಲಕ ನಾಶಗೊಳ್ಳುತ್ತಿರುವ ಗ್ರಾಮೀಣ ಬದುಕಿನ ವಿಧಾನ, ಕಣ್ಮರೆಯಾಗುತ್ತಿರುವ ಅಲಕ್ಷಿತ ಸಮುದಾಯಗಳ, ಅರಣ್ಯವಾಸಿಗಳ ಜೀವನ ಹೋರಾಟ, ಅವರ ವೈಯಕ್ತಿಕ ದುಃಖದ ಕಡೆಗೆ ಪ್ರಜ್ಞಾವಂತರ ಗಮನ ಸೆಳೆಯುವುದು ಈ ಲೇಖಕರ ಮುಖ್ಯ ಕಾಳಜಿ.

ಪ್ರಶಸ್ತಿ ಘೋಷಣೆಯಾದ ಸಂದರ್ಭದಲ್ಲಿ ದೆಹಲಿಯಲ್ಲಿ ಭೇಟಿಯಾದ ಮಹಾಬಳೇಶ್ವರ್ ಸೈಲ್ ಅವರೊಂದಿಗೆ ಲೇಖಕಿ, ಅನುವಾದಕಿ ಗೀತಾ ಶೆಣೈ ನಡೆಸಿದ ಮಾತುಕತೆ ಇಲ್ಲಿದೆ.